ಸಾಕ್ಷಿಯನ್ನು ದಿನಾಂಕಃ 27/03/2026 ರಂದು ಕರೆಯಿಸಿ ಸತ್ಯ ಪ್ರತಿಜ್ಞೆಯ ಮೇಲೆ ಪ್ರಮಾಣೀಕರಿಸಲಾಯಿತು.

**ಮುಂದುವರೆದ ಪಾಟೀ ಸವಾಲುಃ- ಪ್ರತಿವಾದಿ ನಂ.1 ರಿಂದ 3 ಪರ ವಕೀಲರಿಂದಃ**

ನನ್ನ ಅಜ್ಜನ ಹೆಸರು ಮಿಯಾಸಾಬ ಅಬ್ಬಿಗೇರಿ. ನನ್ನ ಅಜ್ಜಿಯ ಹೆಸರು ಖಾಜಾಬಿ ಅಬ್ಬಿಗೇರಿ. ನನ್ನ ಅಜ್ಜನಿಗೆ 5 ಜನ ಗಂಡು ಮಕ್ಕಳು ಮತ್ತು 4 ಜನ ಹೆಣ್ಣು ಮಕ್ಕಳು. 5 ಜನ ಗಂಡು ಮಕ್ಕಳ ಹೆಸರು ನನಗೆ ಗೊತ್ತಿಲ್ಲ. 4 ಜನ ಹೆಣ್ಣು ಮಕ್ಕಳ ಹೆಸರು ದಾವಲಬಿ, ಖಾಜಾಬಿ ,ಪಾಪಾ ಮತ್ತು ಅಮೀನಾ. ಸದರಿ ಆಸ್ತಿ ನಿಮ್ಮ ಅಜ್ಜನಿಗೆ ಹೇಗೆ ಬಂತು ಎಂದು ಕೇಳಲಾಗಿ ಸಾಕ್ಷಿ ಅವರು ಸ್ವಂತ ಗಳಿಸಿದ ಆಸ್ತಿ. ನನ್ನ ಅಜ್ಜನಿಗೆ ಎಷ್ಟು ಆಸ್ತಿಗಳು ಇದ್ದವು ಎಂದು ಕೇಳಲಾಗಿ ಸಾಕ್ಷಿ ಮಲ್ಲಸಮುದ್ರದಲ್ಲಿ 8 ಕೂರಿಗೆ ಜಮೀನು ಇತ್ತು ಮತ್ತು ಗದಗದಲ್ಲಿ 3 ದೊಡ್ಡ ಮನೆಗಳು ಇದ್ದವು ಎಂದು ಹೇಳುತ್ತಾರೆ. ಮಕ್ತುಂಸಾಬ ಮಿಯಾಸಾಬ ರವರಿಗೆ ಏನು ಆಗಬೇಕು ಎಂದರೆ ಮಗನಾಗಬೇಕು ಎಂದು ಹೇಳುತ್ತಾರೆ. ಚಾಂದಸಾಬ ನನಗೆ ಕಾಕಾನಾಗಬೇಕು. ಸದಿರಿ ಚಾಂದಸಾಬ ಮಿಯಾಸಾಬ ರವರ ಸಹೋದರನಾಗಬೇಕು. ನನ್ನ ತಂದೆ ಹೆಸರು ಮಕ್ತುಂಸಾಬ. ಮಿಯಾಸಾಬ ಸತ್ತ ನಂತರ ನಿಮ್ಮ ತಂದೆ ಸೇರಿ ಅವರ ಮಕ್ಕಳು ಸರಳ ವಾರಸುದಾರರು ಎಂದರೆ ಸರಿ. ಮಿಯಾಸಾಬ ತೀರಿಕೊಂಡ ನಂತರ ಆಸ್ತಿಯಲ್ಲಿ ಚಾಂದಸಾಬನಿಗೆ ಅರ್ಧ ಹಿಸ್ಸೆ ಇತ್ತು ಮತ್ತು ಮಕ್ತುಂಸಾಬನಿಗೆ ಅರ್ಧ ಹಿಸ್ಸೆ ಇತ್ತು ಎಂದರೆ ಸರಿ. ಚಾಂದಸಾಬ ಮತ್ತು ಮಕ್ತುಂಸಾಬ ಒಟ್ಟಿಗೆ ವಾಸವಾಗಿದ್ದರು ಎಂದರೆ ಸರಿ. ಚಾಂದಸಾಬ ಮತ್ತು ಮಕ್ತುಂಸಾಬ ಕೂಡಿ ಜಮೀನು ಮಾಡುತ್ತಿದ್ದರು ಎಂದರೆ ಸರಿ. ಮಿಯಾಸಾಬ ತೀರಿಕೊಂಡ ನಂತರ ಆಸ್ತಿಗೆ ಚಾಂದಸಾಬ ಮತ್ತು ಮಕ್ತುಂಸಾಬ ಇಬ್ಬರ ಹೆಸರು ಜಂಟಿಯಾಗಿತ್ತು ಎಂದರೆ ಸರಿ. ಚಾಂದಸಾಬ ರವರ ಹೆಂಡತಿ ಹೆಸರು ಕೇಳಲಾಗಿ ಸಾಕ್ಷಿ ಚಾಂದಸಾಬ ರವರ ಮದುವೆ ಆಗಿರಲಿಲ್ಲ ಎಂದು ಹೇಳುತ್ತಾರೆ. ಚಾಂದಸಾಬ ರವರ ಹೆಂಡತಿ ಹೆಸರು ಮೆಹಬೂಬಿ ಎಂದರೆ ಸರಿ ಎಂದು ಹೇಳಿ ಸಾಕ್ಷಿ ಮುಂದುವರೆದು ಅವರ ಜೊತೆ ಮದುವೆ ಆಗುವುದಿತ್ತು ಆಗಿಲ್ಲ ಎಂದು ಹೇಳುತ್ತಾರೆ. ಮೆಹಬೂಬಿ ರವರ ಜೊತೆ ಚಾಂದಸಾಬ ರವರ ಲಗ್ನ ಆಗಬೇಕಿತ್ತು ಆಗಿಲ್ಲ ಎಂದು ಯಾವ ಆಧಾರದ ಮೇಲೆ ಹೇಳುತ್ತಿದ್ದೀರಿ ಎಂದರೆ ಸಾಕ್ಷಿ ನಾನು ಹೇಳುತ್ತಿದ್ದೇನೆ ಆದರೆ ದಾಖಲೆ ಇಲ್ಲ ಎಂದು ಹೇಳುತ್ತಾರೆ. ಮುಸ್ಲಿಂ ಧರ್ಮದ ಪ್ರಕಾರ ಚಾಂದಸಾಬ ರವರು ಮೆಹಬೂಬಿ ಯವರ ಜೊತೆ

ಲಗ್ನ ಮಾಡಿಕೊಟ್ಟಿದ್ದರು ಅವರು ಒಟ್ಟಿಗೆ ಇರುತ್ತಿದ್ದರು ಎಂದರೆ ಸರಿ. ಚಾಂದಸಾಬ 1975 ರಲ್ಲಿ ತೀರಿಕೊಂಡಿದ್ದಾರೆ. ಚಾಂದಸಾಬ ತೀರಿಕೊಂಡ ನಂತರ ಮಹಬೂಬಿ ಜೀವಂತ ಇದ್ದರು ಎಂದರೆ ಸಾಕ್ಷಿ ಅವರಿಗೆ ಮದುವೆ ಆಗಿದಿಲ್ಲ ಎಂದು ಹೇಳುತ್ತಾರೆ. ಮಹಬೂಬಿ ಜೀವಂತ ಇದ್ದರು ಎಂದರೆ ಇಲ್ಲ ಎಂದು ಹೇಳುತ್ತಾರೆ. ಮೆಹಬೂಬಿ ಯಾವಾಗ ತೀರಿಕೊಂಡಿದ್ದಾರೆ ಎಂದು ನನಗೆ ಗೊತ್ತಿಲ್ಲ.

ಚಾಂದಸಾಬ ತೀರಿಕೊಂಡ ನಂತರ ಅವರ ಪಾಲಿನ ಅರ್ಧ ಹಿಸ್ಸೆಯ ಆಸ್ತಿ ನಿಮ್ಮ ತಂದೆ ಮಕ್ತುಂಸಾಬ ರವರಿಗೆ ಬಂತು ಎಂದು ತೋರಿಸಲು ದಾಖಲೆ ಇದೆಯಾ ಎಂದರೆ ದಾಖಲೆ ಬಗ್ಗೆ ನನಗೆ ಗೊತ್ತಿಲ್ಲ ಎಂದು ಹೇಳುತ್ತಾರೆ. ಚಾಂದಸಾಬ ರವರ ಅರ್ಧ ಹಿಸ್ಸೆ ಆಸ್ತಿ ನಿಮ್ಮ ತಂದೆಗೆ ಯಾವ ರೀತಿ ಬಂತು ಎಂದು ಕೇಳಲಾಗಿ ಸಾಕ್ಷಿ ನನಗೆ ಐಡಿಯಾ ಇಲ್ಲ ಎಂದು ಹೇಳುತ್ತಾರೆ. ಚಾಂದಸಾಬ ತಮ್ಮ ಅರ್ಧ ಹಿಸ್ಸಾ ಆಸ್ತಿಯನ್ನು ಯಾವುದಾದರೂ ಕಾಗದ ಮಾಡಿ ನಿಮ್ಮ ತಂದೆಗೆ ಕೊಟ್ಟಿದ್ದೀರಾ ಎಂದು ಕೇಳಲಾಗಿ ಸಾಕ್ಷಿ ಆಗ ನಾವು ಚಿಕ್ಕವರು ಇದ್ದು ನನಗೆ ಗೊತ್ತಿಲ್ಲ ಎಂದು ಹೇಳುತ್ತಾರೆ. ಚಾಂದಸಾಬ ರವರು ಅರ್ಧ ಹಿಸ್ಸಾ ಆಸ್ತಿ ನಿಮ್ಮ ತಂದೆಗೆ ಬಂದಿದ ಬಗ್ಗೆ ದಾಖಲೆ ಹಾಜರು ಮಾಡಿದ್ದೀರಾ ಎಂದರೆ ಮಾಡಿದ್ದೇನೆಂದು ಹೇಳುತ್ತಾರೆ.

ಆರ್ ಎಸ್ ಎ ನಂ.277/2 ಮತ್ತು 252/1 ಆಸ್ತಿಗಳು ಪ್ರತಿವಾದಿ ನಂ.1 ರಿಂದ 3 ರವರ ಹೆಸರಿನಲ್ಲಿ ಇವೆ ಎಂದರೆ ಸರಿ. ಸಾಕ್ಷಿ ಮುಂದುವರೆದು ನಮ್ಮ ಫೋರ್ಜರಿ ಸಹಿ ಮಾಡಿ ನಮ್ಮ ಹೆಸರು ತೆಗೆದು ತಮ್ಮ ಹೆಸರನ್ನು ಹಚ್ಚಿಕೊಂಡಿದ್ದಾರೆ ಎಂದು ಹೇಳುತ್ತಾರೆ. ಪ್ರತಿವಾದಿ ನಂ.1 ರಿಂದ 3 ನಿಮ್ಮ ಹೆಸರು ತೆಗೆದು ಅವರು ಹಚ್ಚಿಕೊಂಡಿದ್ದಾರೆ ಎಂದು ಸುಳ್ಳು ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ. ಈ ಆಸ್ತಿಗಳಲ್ಲಿ ಅರ್ಧ ಹಿಸ್ಸಾ ಚಾಂದಸಾಬ ರವರಿಗೆ ಇತ್ತು ಎಂದರೆ ಸರಿ.

ಚಾಂದಸಾಬ ರವರು ತನ್ನ ಅರ್ಧ ಹಿಸ್ಸಾ ಆಸ್ತಿಯನ್ನು ಪ್ರತಿವಾದಿ ನಂ.1 ರಿಂದ 3 ರವರಿಗೆ ಮತ್ತು ಅವರ ಮತ್ತೊಬ್ಬ ಮಗನಿಗೆ ಮುಸ್ಲಿಂ ಧರ್ಮದ ಪ್ರಕಾರ ಮೌಖಿಕ ಭಕ್ಷಿಸ ಮೂಲಕ ಬಿಟ್ಟು ಕೊಟ್ಟಿದ್ದಾರೆ, ಅದರ ಪ್ರಕಾರ ಮ್ಯೂಟೇಷನ ನಂ. 133771 ಪ್ರಕಾರ ಪ್ರತಿವಾದಿಗಳ ಹೆಸರು ಬಂದಿದೆ ಎಂದರೆ ವಾದಿ ಪರ ವಕೀಲರು ಈ ಬಗ್ಗೆ ಅವರ ಪ್ರತಿವಾದ

ಪತ್ರ ದಿಃ 21.02.2013 ರಲ್ಲಿ ಅದರ ಬಗ್ಗೆ pleading ಇಲ್ಲ ಮತ್ತು ಪ್ರತಿವಾದಿಗಳು ದಿಃ 22/02/2024 ರಂದು ಹಾಕಿದ ಪ್ರತಿವಾದವನ್ನು ಪರಿಗಣಿಸದೆ ಮೇಲೆ ಹೇಳಿದ ಪ್ರತಿವಾದ ಪತ್ರ ಪರಿಗಣಿಸಬೇಕು ಎಂದು ಹೇಳಿದ್ದರಿಂದ ಈ ಪ್ರಶ್ನೆಗೆ ಸಾಕ್ಷಿಯಿಂದ ಉತ್ತರ ತೆಗೆದುಕೊಂಡಿರುವುದಿಲ್ಲ.

ನೀವು ನಿಮ್ಮ ವಾದ ಪತ್ರದಲ್ಲಿ ಹೇಳಿದ ಚರ ಆಸ್ತಿಗಳು ನಿಮ್ಮ ಅಜ್ಜ ಮಿಯಾಸಾಬ ರವರದಾ ಎಂದು ಕೇಳಲಾಗಿ ಹೌದು ಎಂದು ಹೇಳುತ್ತಾರೆ. ಈ ಆಸ್ತಿಗಳು ಮಿಯಾಸಾಬ ರವರ ಆಸ್ತಿ ಎಂದು ತೋರಿಸಲು ದಾಖಲೆ ಇದ್ದಾವಾ ಎಂದರೆ ಇಲ್ಲ ಎಂದು ಹೇಳುತ್ತಾರೆ. ಸದರಿ ಚರ ಆಸ್ತಿಗೂ ಸಹ ಚಾಂದಸಾಬ ಮತ್ತು ಮಕ್ತುಂಸಾಬ ಇಬ್ಬರು ಅರ್ಧ ಹಿಸ್ಸೆಯ ಪಾಲುದಾರರು ಆಗಿದ್ದರು ಎಂದರೆ ಸರಿ. ಸದರಿ ಆಸ್ತಿಗೆ ಚಾಂದಸಾಬ ಮತ್ತು ಮಕ್ತುಂಸಾಬ ರವರಿಗೆ ಬಂದ ಬಗ್ಗೆ ದಾಖಲೆ ಏನಾದರೂ ನೋಡಿದೀರಾ ಎಂದರೆ ಇಲ್ಲ ಎಂದು ಹೇಳುತ್ತಾರೆ. ಸದಿರಿ ಚರ ಆಸ್ತಿಗಳು ನಿಮ್ಮ ತಂದೆಯವರದು ಎಂದು ತೋರಿಸಲು ದಾಖಲೆ ಹಾಜರು ಮಾಡಿದ್ದೀರಾ ಎಂದರೆ ಇಲ್ಲ ಎಂದು ಹೇಳುತ್ತಾರೆ.

**ಮುಂದಿನ ಪಾಟೀ ಸವಾಲಿಗೆ ಕಾಲವಾಕಶ ಕೇಳಿದ್ದು, ಆಲಿಸಿ ಮುಂದೂಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯು ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸರಿ ಇದೆ.

(ಶ್ರೀಮತಿ ಪಿ. ಆರ್ ಪಾಟೀಲ)
27.03.2026
**ಅಧಿಕ ಹಿರಿಯ ದಿವಾಣಿ ನ್ಯಾಯಾಧೀಶರು, ಗದಗ**